# ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮಿಷ್ ಆವ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 15, ಸ್ 1903.


## IIನೆ ಭಾಗ.

ಇಂಡ್ಯೆಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಲೀರು ವಗ್ಸೆರೇರಿಂದ ಕೂಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 10ನೆ ಅಕ್ಟೋಬರ್ 1903.

ನಂಬರು 360, ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಈ ಮೂಲಕ ಪ್ರಾಮಿಷ್ ಮಾಡುವದೇನಂದರೆ, 1903ನೆ ಇಸವಿ ನೊವೆಂಬರ್ ಗುರ್ವಾ ತಾರೀಖಿನಲ್ಲಿ ಅಥವಾ ಆ ತರುವಾಯ ಕ್ಷಿಪ್ರದಲ್ಲಿ ಬೆಂಗಳೂರ ಡಿಸ್ಟ್ರಿಕ್ಟಿಗೆ ಕೀರದ ಬೆಂಗಳೂರ ತಾಲ್ಲೂಕಿನಲ್ಲಿ ರೀ-ಸರ್ವೆ ಕಲಸಗಳು ಪ್ರಾರಂಭಿಸಲ್ಪಡುವವೆ.

ಜೆ. ಪಿ. ಗ್ಯಾಂಟ್,
ಸರ್ವೆ ಮತ್ತು ಸೆಟ್ಲ್ಮೆಂಟ್ ಕಮಿಷನರ್, ಮೈಸೂರ್.

---

ಫಾರೆಸ್ಟ್ಸ್ ಇಲಾಖಾ.

ನೋಟಿಫಿಕೇಷ್ನ್, ತಾರೀಖು 12ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1903–1904ನೆ ಇಸವಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟ್ಸುಗಳ ಪಸಾರೆ ಜೆನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಸ್ಟ್ ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಕುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ.

ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ. ಹರಾಜು ಆಯಾಯ ತಾರೀಕಿನ ಮಧ್ಯಾನ್ಹ 12 ಘಂಟೆಗೆ ಸುರು ಮಾಡಲ್ಪಡುವದು.

| ನಂಬರ್. | ರೇಂಜ್. | ಸ್ಟೇಟ್ ಫಾರೆಸ್ಟ್ಸುಗಳ ಹೆಸರು. | ಹರಾಜು ಮಾಡತಕ್ಕ ಸ್ಥಳ. | ಹರಾಜು ತಾರೀಖು. |
|---|---|---|---|---|
| 1 | ಬೆಂಗಳೂರು ... | ಉಜನಿ, ಹುಲ್ಕುಡಿ, ಮಾಕಳಿ, ದೇವರಬೆಟ್ಟ, ನಾಯಕನಹಳ್ಳಿ. | ದೊಡ್ಡಬಳ್ಳಾಪುರ. | 31ನೆ ಅಕ್ಟೋಬರ್ 1903. |
| | | ರಾಗಿಹಳ್ಳಿ ಫಾರೆಸ್ಟ್ ... | ಬನ್ನೇರಘಟ್ಟ. | 3ನೆ ನವಂಬರ್ 1903. |
| | | ಬಳನಕುಪ್ಪೆ ... | | |
| | | ತಮ್ಮನಾಯಕನಹಳ್ಳಿ ... | | |

| ನಂಬರ. | ರೇಂಜ್. | ಸ್ಟೇಟ್ ಫಾರೆಸ್ಟ್ಸುಗಳ ಹೆಸರು. | ಹರಾಜು ಮಾಡತಕ್ಕ ಸ್ಥಳ. | ಹರಾಜು ತಾರೀಖು. |
|---|---|---|---|---|
| 2 | ಕೊಲ್ಲೇಸುಪ್ಯಾಟೆ ... | ಕುಂಬಳಗೋಡು ರಿಜರ್ವ ...<br>ಹುಲತಾರು ..<br>ಮಾಕಳಿ ..<br>ತೆಂಗಿನಕಲ್ಲು ..<br>ಚಿಕ್ಕ ಮಂಣುಗುಡ್ಡಿ ...<br>ದೊಡ್ಡ ಮಂಣುಗುಡ್ಡಿ ..<br>ಅಚ್ಚಲ್ ... | ಕೊಲ್ಲೇಸೇಪೇಟೆ ರೇಂಜ್ ಫಾರೆಸ್ಟ್ಸ ಆಫೀಸ್. | 7ನೆ ನವಂಬರ 1903. |
| | | ಸಾವನದುರ್ಗ ...<br>ಕಿದ್ದೆದೇವರಬೆಟ್ಟ ...<br>ಅತ್ತಿಂಗೆರೆ .. | ನಾಯಕನಪಾಳ್ಯ ಫಾರೆಸ್ಟ್ಸ ಲಾಡ್ಜು ಮಾಗಡಿ ತಾಲ್ಲೂಕು. | 8ನೆ ಡಿಟೋ 1903. |
| 3 | ಕಾನಕಾನಹಳ್ಳಿ .. | ಬಿಳಿಕಲ್ ಫಾರೆಸ್ಟ್ಸ .<br>ಬಾಣಂತಿಮಾರಿ ... | ಕಾನಕಾನಹಳ್ಳಿ ರೇಂಜ್ ಫಾರೆಸ್ಟ್ಸ ಆಫೀಸ್. | 10ನೆ ಅಕ್ಟೋಬರ್ 1903. |
| | | ಮುಗ್ಗೂರು ಫಾರೆಸ್ಟ್ಸ ... | ಕೋಡಿಹಳ್ಳಿ ಮುಸಾಫರ ಬಂಗ್ಲೆ. | 11ನೆ ಡಿಟೋ 1903. |
| | | ಚಿಲಂದಾಡಿ ...<br>ಬಸವನಬೆಟ್ಟ ...<br>ಕಬ್ಬಾಳು .. | ಸಾತನೂರು ಮುಸಾಫರ ಬಂಗಲೆ. | 12ನೆ ಡಿಟೋ 1903. |

## ಜೆನಸಿಯು ತಪಶೀಲ್.

1. ಹುಣಸೇಹಂಣು, 2. ಹೊಂಗೇಬೀಜ, 3. ಶೀಗೇಕಾಯಿ, 4. ಗೋಂದು, 5. ಜೀನುತುಪ್ಪ, 6. ಜೇನುಮೇಣ, 7. ಕಪಿಲಾರಂಗು, 8. ಗೇರುಬೀಜ, 9. ಬ್ಯಾಲದಹಂಣು, 10. ಕಲ್ಲುಹೂವ್ವು, 11. ಚಾರಪೊಪ್ಪು, 12. ತಾರೇಕಾಯಿ, 13. ಜಗಜೇಬೀಜ, 14. ಅಂಟವಾಳದಕಾಯಿ, 15. ಕಾಡಹರಳು, 16. ಖೂರಗದಹತ್ತಿ, 17. ಕಿರಿ ಈಚಲು, 18. ಮಾಗಳಿಬೇರು, 19. ಸೊಗದೇಬೇರು, 20. ಹಿಪ್ಪೆಬೀಜ, 21. ಕೊಂಬುಗಳು.

2. ಚಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಸುರು ದರಖಾಸ್ತುದಾರನನ್ನು ಗುರಿ ಮಾಡಲ್ಪಡುತ್ತೆ. ಆದರೆ ಫಾಯಿದೆ ಉಂಟಾದಲ್ಲಿ ಈತನು ಭಾಗಿಯಾಗುವದಿಲ್ಲಾ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಕೇಪಸಿಕೊಳ್ಳುವದಲ್ಲದೆ ಇನ್ನು ಬಾಕಿ ಬೀಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

4. ರೇಂಜ್ ಫಾರೆಸ್ಟ್ಸ ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತು ಮಂಜೂರ್ಮಾಡುವದಕ್ಕೆ ಆಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನು ಇನಾಂದಾರರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

6. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳೇ ಆಗಲಿ ಪಸಾರೆ ಜೆನಸಿ ಜವಾವಣಿ ನೆಪದಮೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

7. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜೆನಸಿ ವಿನಃ ಇತರ ಯಾವ ಜೆನಸಿಯನ್ನೂ ಜವಾಯಿಸಕೂಡದು.

8. ದರಖಾಸ್ತುದಾರನ ಏಜಂಟರುಗಳಾಗಲೀ ಅಥವಾ ಆಳುಗಳಾಗಲೀ ಪಸಾರೆ ಜೆನಸಿ ಜವಾವಣೀ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

9. ದರಖಾಸ್ತುದಾರನು 1904ನೆ ಇಸವಿ ಏಪ್ರೆಲ್ ಆಖೈರು ವಳಗಾಗಿ ಎಲ್ಲಾ ಪಸಾರೆ ಜೆನಸೀಯನ್ನು ಸ್ಟೇಟ್ ಫಾರೆಸ್ಟ್ಸ ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

10. ಸ್ಟೇಟ್ ಫಾರೆಸ್ಟ್ಸಿಗೆ ದರಖಾಸ್ತುದಾರನ ಆಕ್ಷೇಪ್ಣೆಯಿಂದಲಾಗಲೀ ಅಥವಾ ಈತನ ಆಳುಗಳಿಂದಲಾಗಲೀ ಫಾರೆಸ್ಟ್ಸಿಗೆ ಪೆಂಕಿ ಬಿತ್ತೆಂದು ಫಾರೆಸ್ಟ್ಸ ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ.

11. ಧರಖಾಸ್ತುದಾರನೇ ಆಗಲೀ ಅಥವಾ ಈತನ ನೌಕರರೇ ಆಗಲೀ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾನಂತರ ಸ್ಟೇಟ್ ಫಾರೆಸ್ಟ್‌ನಲ್ಲಿ ಪ್ರವೇಶ ಮಾಡಕೂಡದು.

12. ಹರಾಜು ಧರಖಾಸ್ತುದಾರನು ತನ್ನ ಕಂಟ್ರಾಕ್ಟು ಪ್ರಕಾರ ಪರತ್ತುಗಳಿಗೆ ಬದ್ಧನಾಗಿರಲು ಖಾತರೀ ಬಗ್ಗೆ 50 ರೂಪಾಯಿಗಳನ್ನು ನಗದಾಗಿ ತೇವಣಿ ಇಡಬೇಕು. ಪರತ್ತುಗಳ ಪೈಕಿ ಯಾವ ಭಾಗದಲ್ಲಿ ಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಬಗ್ಗೆ ತೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಹೆಗದುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹ ರದ್ದು ಪಡಿಸಲಾಗುತ್ತೆ.

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

---

ಸ್ ಈ 1903ನೆ ಇಸವಿ ಅಕ್ಟೋಬರ್ 8ನೆ ತಾರೀಖು ಮೈಸೂರು ಗೆಜೆಟ್ IIನೆ ಭಾಗದ 510–511ನೆ ಪುಠದಲ್ಲಿ ಮೈನರ್ ಫಾರೆಸ್ಟ್ ಪ್ರಾಡ್ಯೂಸ್ ಹರಾಜ್ ವಿಷಯದಲ್ಲಿ ಪ್ರಕಟಿಸಿರುವ ನೋಟಿಫಿಕೇಷನ್ ಎಲ್ಲರು ನೋಡತಕ್ಕದ್ದು.

ವೈ. ಸೀತಾರಾಮಯ್ಯ,
ಫಾರೆಸ್ಟ್ ಡೆಪ್ಯುಟಿ ಕಮಿಷನರ್, ಹಾಸನದ ಡಿಸ್ಟ್ರಿಕ್ಟ್.

---

## ನೋಟಿಸ್, ತಾರೀಖು 10ನೆ ಅಕ್ಟೋಬರ್ 1903.

ತೀರ್ಥಹಳ್ಳಿ ಸಂದಲು ಕೋಡಿ ಲೇಟ್ ಫಾರೆಸ್ಟರ್ ಗಾರ್ಡ್ ನಂದಿ ಬಸವನಿಗೆ ಸಲ್ಲತಕ್ಕ ತಲಬು ರೂ. 3—6—2 ಪಾವತಿ ಆಗದೆ ತೀರ್ಥಹಳ್ಳಿ. ರೇಂಜು ಫಾರೆಸ್ಟ್ ಆಫೀಸಿನಲ್ಲಿ ಬಾಕಿ ಇರುತ್ತೆ. ಈತನ ವಾಸಸ್ಥಳ ಗೊತ್ತಿಲ್ಲವಾದ್ದರಿಂದ ಈ ತಾರೀಖು ಲಾಗಾಯ್ತು ಎರಡು ತಿಂಗಳ ಒಳಗಾಗಿ ಸದರಿ ನಂದಿ ಬಸವನಾಗಲಿ ಅಥವಾ ಈತನ ಹಕ್ಕುದಾರನಾಗಲಿ ನಮ್ಮ ರೂಬುರೂಬು ಹಾಜರಾಗಿ ಮೊಬಲಗು ಪಡೆಕೊಳ್ಳದೆ ತಪ್ಪಿಹೋದ ಪಕ್ಷದಲ್ಲಿ ಸದರಿ ಮೊಬಲಗು ಸರಕಾರಕ್ಕೆ ಜಪ್ತ ಜಮಾ ಮಾಡಿಸಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

---

## ತಾರೀಖು 17ನೆ ಸೆಪ್ಟಂಬರ್ 1903.

1900ನೆ ಇಸವಿ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1903ನೆ ಸೆಪ್ಟಂಬರ್ ಗುರ್ರೆ ಲಾಗಾಯ್ತು ಈ ಇಸ್ತಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟ್ ಆಗಿರುತ್ತದೆ.

### ಷೆಡ್ಯೂಲ್.

| ಡಿಸ್ಟ್ರಿಕ್ಟು. | ತಾಲ್ಲೂಕಾ ಹೊಬಳಿ ಪಟ್ಟಿ ನಂಬರು. | ಸರ್ವೆ ನಂಬರು ಅಥವಾ ಸ್ಥಳ. | ಹೆಸರು. | ಚಕ್ಕುಬಂದಿ. |
|---|---|---|---|---|
| ಚಿತ್ರದುರ್ಗ. | ಹೊಳಲಕೆರೆ ತಾಲ್ಲೂಕು. | ಪಶ್ಚಿಮ ಪಟ್ಟಿ. | ಗರ್ಗಾ ಕಾಡಿಲ್. | ಉತ್ತರಕ್ಕೆ.—ಗರ್ಗಾ ಗ್ರಾಮದ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸದರೀ ಗ್ರಾಮದ ಸರ್ವೆ ನಂ. 1, 2, 12 ವ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಗ್ನೇಯ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ.<br><br>ಪೂರ್ವಕ್ಕೆ.—ತರುವಾಯ ಗರ್ಗದ ಸರ್ವೆ ನಂ. 16, ಗಿಲ್ಕೀನಹಳ್ಳಿಯ ಸರ್ವೆ ನಂ. 44, 43 ವ 42 ಮತ್ತು ಹಳೇಹಳ್ಳಿಯ ಸರ್ವೆ ನಂ. 41 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆದರ ಕೇವಲ ದಕ್ಷಿಣ ಮೂಲೆಗೆ ಹೋಗುತ್ತದೆ. ಆಮೇಲೆ ಹಳೇಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ.<br><br>ದಕ್ಷಿಣಕ್ಕೆ.—ತರುವಾಯ ಹೊಳಲಕೆರೆಯ ಸರ್ವೆ ನಂ. 276ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 274ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ.<br><br>ಪಶ್ಚಿಮಕ್ಕೆ.—ಆಮೇಲೆ ಹೊಳಲಕೆರೆಯ ಸರ್ವೆ ನಂ. 274 ವ 273, ಚೀರನಹಳ್ಳಿಯ ಸರ್ವೆ ನಂ. 27, ಚೆಟ್ನಹಳ್ಳಿಯ ಸರ್ವೆ ನಂ. 12 ಮತ್ತು ಹಾರೇನಹಳ್ಳಿಯ ಸರ್ವೆ ನಂ. 30 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ. |